ಓಂ ಶಾಂತಿ, ಬಾಪ್‌ದಾದಾ, ಅವ್ಯಕ್ತ ಮುರಳಿ 27-01-1976.

# *ಮೂರು ಶ್ರೇಷ್ಠ ಈಶ್ವರೀಯ ವರದಾನಗಳು*

(तीन श्रेष्ठ ईश्वरीय वरदान)

**ಸದಾ ಆರೋಗ್ಯವಾಗಿ, ಧನವಂತರಾಗಿ, ಸಂತೋಷವಾಗಿ, ತಯಾರಾಗುವ ವರದಾನವನ್ನು ಕೊಡುವ ವರದಾತ, ಆತ್ಮಿಕ ದೃಷ್ಟಿಯಿಂದ ಅದ್ಭುತ ಮಾಡುವ ಆತ್ಮಿಕ ತಂದೆ, ಬಿಕಾರಿಗಳಿಂದ ರಾಜನನ್ನಾಗಿ ತಯಾರು ಮಾಡುವವರು, ಪರಮ ಶಿಕ್ಷಕನು ಮತ್ತು ತ್ರಿಶೂಲವನ್ನು ಮುಳ್ಳಾಗಿ ಮಾಡುವ ಸದ್ಗುರುವಾದ ಶಿವ ತಂದೆ ಹೇಳಿದರು.**

ಇಂದು ಅತಿ ಹಳೆಯ ಮತ್ತು ಹೊಸಮಕ್ಕಳು ತಮ್ಮ ನಿಜಸ್ಥಾನ ಹಾಗೂ ತಮ್ಮ ಸಾಕಾರ ಮಧುರಮನೆಯಾದ ಮಧುಬನ ಸ್ವರ್ಗಾಶ್ರಮದಲ್ಲಿ ಮಿಲನದ ಜನ್ಮಸಿದ್ಧ ಅಧಿಕಾರವನ್ನು ಪ್ರಾಪ್ತಿ ಮಾಡಿಕೊಂಡು ಹರ್ಷಿತರಾಗುತ್ತಿದ್ದಾರೆ. ಬಾಪ್‌ದಾದಾರವರೂ ಸಹ ಇಂತಹ ಹರ್ಷಿತವಾಗಿರುವ ಆತ್ಮರನ್ನು ನೋಡಿ ಪ್ರತಿಯೊಂದು ಆತ್ಮರ ಅದೃಷ್ಟವನ್ನು ನೋಡಿ ಹರ್ಷಿತವಾಗುತ್ತಿದ್ದಾರೆ. ಹೇಗೆ ಮಕ್ಕಳಿಗೆ ತಂದೆಯ ಮೂಲಕ ಆಸ್ತಿಯ ಪ್ರಾಪ್ತಿಯಾಗುತ್ತಲೇ ಖುಷಿಯಾಗುತ್ತದೆಯೋ ಹಾಗೆಯೇ ಬಾಪ್‌ದಾದಾರವರೂ ಸಹ ಲಾಸ್ಟ್ ಸೊ ಫಾಸ್ಟ್ ಆಗಿರುವ ಪುರುಷಾರ್ಥಿಗಳನ್ನು ತೀವ್ರ ಪುರುಷಾರ್ಥದ ಲಗನ್ನಿನಲ್ಲಿ ಮಗ್ನರಾಗಿರುವುದನ್ನು ನೋಡಿ ಖುಷಿಯಾಗುತ್ತದೆ. ಫಾಸ್ಟ್ ಪುರುಷಾರ್ಥ ಮಾಡುವವರ ಚಹರೆ ಮತ್ತು ಚಲನೆಯು ತಂದೆಯ ಸಮಾನವಾಗಿ ಸದಾ ಆತ್ಮೀಯತೆಯಲ್ಲಿರುವುದು ಕಂಡುಬರುತ್ತದೆ. ಆತ್ಮೀಯತೆಯಲ್ಲದೆ ಅನ್ಯಯಾವುದೇ ಸಂಕಲ್ಪ ಅಥವಾ ಸ್ಮೃತಿಯಿರುವುದಿಲ್ಲ ಅರ್ಥಾತ್ ತಂದೆಯ ಮೂಲಕ ಪ್ರಾಪ್ತಿಯಾಗಿರುವ ಸರ್ವಶಕ್ತಿಗಳು ಸ್ವರೂಪದಲ್ಲಿ ಕಂಡುಬರುತ್ತದೆ. ಅವರ ಪ್ರತೀ ದೃಷ್ಟಿಯಲ್ಲಿ ಪ್ರತಿಯೊಂದು ಆತ್ಮನನ್ನು ದೃಷ್ಟಿಯಿಂದ ಪರಿವರ್ತನೆ ಮಾಡುವಂತಹ ಆತ್ಮೀಯತೆಯು ಕಂಡು ಬರುತ್ತದೆ.

ಇಂತಹ ಶ್ರೇಷ್ಠಸ್ಥಿತಿಯನ್ನು ಪ್ರಾಪ್ತಿ ಮಾಡಿಕೊಳ್ಳುವುದಕ್ಕಾಗಿ ಸದಾ ಎರಡು ಮಾತುಗಳನ್ನು ನೆನಪಿಟ್ಟುಕೊಳ್ಳಬೇಕು. ಒಂದು-ಸ್ವಯಂನ್ನು ಅಕಾಲ ಮೂರ್ತಿ ಎಂದು ತಿಳಿಯುವುದು, ಎರಡನೆಯದು-ಸ್ವಯಂನ್ನು ಸದಾ ತ್ರಿಕಾಲದರ್ಶಿ ಮೂರ್ತಿ ಎಂದು ತಿಳಿಯುವುದು. *ಅಕಾಲ ಸಿಂಹಾಸನ ಅಧಿಕಾರಿ ಅಥವಾ ಅಕಾಲಮೂರ್ತಿ ಎಂದರೆ ನಿರಾಕರ ಸ್ಥಿತಿ, ತ್ರಿಕಾಲ ದರ್ಶಿ ಅಥವಾ ತ್ರಿಮೂರ್ತಿ ತಂದೆಯ ಸಿಂಹಸನಾಧಿಕಾರಿ ಎಂದರೆ ಸಾಕಾರ ಕರ್ಮಯೋಗಿ ಸ್ಥಿತಿ.* ಪ್ರತಿಯೊಂದು ಸಂಕಲ್ಪವನ್ನು ಸ್ವರೂಪದಲ್ಲಿ ತರುವುದಕ್ಕೆ ಮೊದಲು ಇವೆರಡು ಮಾತುಗಳನ್ನು ಪರಿಶೀಲನೆ ಮಾಡಿಕೊಳ್ಳಬೇಕು. ನಿರಾಕಾರಿ ಮತ್ತು ಸಾಕಾರಿ ಎರಡೂ ಸ್ವರೂಪದಲ್ಲಿ ಸ್ಥಿತನಾಗಿದ್ದೇನೆಯೇ? ಈ ಸ್ಮೃತಿಯಿಂದ ಸ್ವತಹವಾಗಿ ಸಮರ್ಥ-ಸ್ವರೂಪರಾಗಿಬಿಡುತ್ತೀರಿ ಅರ್ಥಾತ್ ಹೆಲ್ತ್, ವೆಲ್ತ್ ಮತ್ತು ಹ್ಯಾಪಿನೆಸ್ (ಆರೋಗ್ಯ, ಸಂಪತ್ತು ಮತ್ತು ಸಂತೋಷ)ನ ಅನುಭವವು ಪ್ರತೀ ಸಮಯದಲ್ಲಾಗುತ್ತದೆ. ಭಲೆ ಶರೀರದ ಕರ್ಮಭೋಗವು ಶೂಲಕ್ಕಿಂತಲೂ ದೊಡ್ಡರೂಪದಲ್ಲಿರಬಹುದು ಆದರೆ ಸದಾ ತಮ್ಮನ್ನು ಸಾಕ್ಷಿಯೆಂದು ತಿಳಿಯುವುದರಿಂದ ಕರ್ಮಭೋಗಕ್ಕೆ ವಶರಾಗುವುದಿಲ್ಲ. ಪ್ರತೀ ಕರ್ಮಭೋಗವು ಶೂಲದಿಂದ ಮುಳ್ಳಿನ-ಸಮಾನ ಅನುಭವ ವಾಗುತ್ತದೆ. ಭವಿಷ್ಯದ ಜನ್ಮ-ಜನ್ಮಾಂತರದ ಕರ್ಮಭೋಗದಿಂದ ಮುಕ್ತರಾಗುವ ಖುಷಿಯು ಈ ಕರ್ಮಭೋಗವನ್ನು ಸಮಾಪ್ತಿ ಮಾಡಲು ಔಷಧಿಯ ರೂಪವಾಗಿಬಿಡುತ್ತದೆ. ಖುಷಿಯು ಔಷಧಿಯಾಗಿಬಿಡುತ್ತದೆ.

ಈಗ ತಮ್ಮನ್ನು ಪರಿಶೀಲನೆ ಮಾಡಿಕೊಳ್ಳಿರಿ . ನಾನು ಸದಾ ಆರೋಗ್ಯವಾಗಿರುತ್ತೇನೆಯೇ? ಸದಾ ಆರೋಗ್ಯ ಭವದ ವರದಾನವನ್ನು ಪ್ರಾಪ್ತಿ ಮಾಡಿಕೊಂಡಿದ್ದೇನೆಯೇ? ವರದಾತ ತಂದೆಯ ಮೂಲಕ ಮೂರೂ ವರದಾನಗಳನ್ನು - ಸದಾ ಆರೋಗ್ಯ ಭವ, ಸದಾ ಸಂಪನ್ನಭವ, ಸದಾ ಸಂತೋಷ ಭವದ ಪ್ರಾಪ್ತಿ ಮಾಡಿಕೊಂಡಿದ್ದೇನೆಯೇ? ಸದಾಕಾಲದ ಆಸ್ತಿಯ ಪ್ರಾಪ್ತಿಯಾಯಿತೆ ಅಥವಾ

ಅಲ್ಪಕಾಲದ್ದಾಗಿದೆಯೇ? ಯಾವುದೇ ಮಾಯಾವೀ ಕಾಯಿಲೆಗೆ ವಶನಾಗಿ ತಮ್ಮ ಸದಾಕಾಲದ ಆರೋಗ್ಯದ ಆಸ್ತಿಯನ್ನಂತು ಕಳೆದುಕೊಳ್ಳಲಿಲ್ಲವೇ? ತಂದೆಯ ಮೂಲಕ ಸದಾ ಸಂಪನ್ನ ಅರ್ಥಾತ್ ಸರ್ವಶಕ್ತಿಗಳ ಖಜಾನೆಯಿಂದ ಸಂಪನ್ನವಾಗಿರುವ ವರದಾನವನ್ನು ಪ್ರಾಪ್ತಿ ಮಾಡಿಕೊಂಡಿದ್ದೇನೆಯೇ? ಸರ್ವಖಜಾನೆಗಳ ಮಾಲೀಕನೆಂದು ಅನುಭವ ಮಾಡುತ್ತೀರಾ ಅರ್ಥಾತ್ ದೇವತೆಗಳ ಖಜಾನೆಯಲ್ಲಿ ಯಾವುದೇ ಅಪ್ರಾಪ್ತವಾದ ವಸ್ತುವಿಲ್ಲ ಎನ್ನುವ ಗಾಯನವಂತು ಇದೆ. ಆದರೆ ದೇವತೆಗಳಿಗಿಂತಲೂ ಬ್ರಾಹ್ಮಣರು ಶ್ರೇಷ್ಠ ಎಂದು ಗಾಯನವಿದೆ. ಬ್ರಾಹ್ಮಣರ ಖಜಾನೆಯಲ್ಲಿ ಯಾವುದೇ ಅಪ್ರಾಪ್ತ ವಸ್ತುವಿಲ್ಲ. ಈ ರೀತಿ ಸದಾ ಸಂಪನ್ನರು ಎಂದು ಅನುಭವ ಮಾಡುತ್ತೀರಾ?

ಸದಾ ಸಂಪನ್ನರ ಜೊತೆಜೊತೆಯಲ್ಲಿ ತಮ್ಮನ್ನು ಸದಾ ಸಂತೋಷ ಅರ್ಥಾತ್ ಸದಾ ಹರ್ಷದ ಅನುಭವವನ್ನೂ ಮಾಡುತ್ತೀರಾ? ಒಂದುವೇಳೆ ಮಾಯೆಯ ಅಥವಾ ಮಾಯೆಯ ಯಾವುದೇ ಆಕರ್ಷಣೆಯಿಲ್ಲವೆಂದರೆ ಸದಾ ಹರ್ಷಿತವಾಗಿರುತ್ತೀರಿ. ಈ ರೀತಿ ಸದಾ ಹರ್ಷಿತವಾಗಿರಲು ಸದಾ ಒಂದು ಸಂಕಲ್ಪ ಸ್ಮೃತಿಯಲ್ಲಿರುತ್ತದೆ. ಏನು ಪಡೆಯಬೇಕಿತ್ತೋ ಅದನ್ನು ಪಡೆದೆನು. ಪಡೆಯುವುದಕ್ಕಾಗಿ ಈಗ ಮತ್ತೇನು ಉಳಿದುಕೊಂಡಿಲ್ಲ, ಇಂತಹ ಸಂಕಲ್ಪದಲ್ಲಿ ಸ್ಥಿತರಾಗಿರುವವರು ಅರ್ಥಾತ್ ಎವರ್-ಹ್ಯಾಪಿ ಆಗಿರುವವರ ಚಿಹ್ನೆಯೇನಾಗಿರುತ್ತದೆ? ಸದಾ ಹರ್ಷಿತವಾಗಿರುವವರ ಮನ, ವಾಣಿ ಮತ್ತು ಕರ್ಮದಿಂದ ಸರ್ವಾತ್ಮರಿಗೆ ಸದಾ ಖುಷಿಯ ದಾನವನ್ನು ಕೊಡುತ್ತಿರುತ್ತಾರೆ. ಯಾವುದೇ ಆತ್ಮನಪ್ರತಿ ತಂದೆಯ ಸಮಾನ ದುಃಖಹರ್ತ-ಸುಖಕರ್ತ, ಸದಾ ನಿಶ್ಚಿಂತಪುರಿಯ ಚಕ್ರವರ್ತಿಯೆಂದು ಅನುಭವ ಮಾಡುತ್ತಾರೆ. ಚಕ್ರವರ್ತಿ ಅರ್ಥಾತ್ ದಾತನಾಗಿರುತ್ತಾರೆ. ಈ ರೀತಿ ಹರ್ಷಿತರಾಗಿರುವ ಆತ್ಮನ ಪ್ರತೀ ಸಂಕಲ್ಪದ ಪ್ರಕಂಪನಗಳ ಮೂಲಕ ಒಂದು ಸೆಕೆಂಡಿನ ಆತ್ಮಿಕ ದೃಷ್ಟಿಯ ಮೂಲಕ ಒಂದು ಸೆಕೆಂಡಿನ ಸಂಪರ್ಕದ ಮೂಲಕ, ಮುಖದ ಒಂದು ಮಾತಿನ ಮೂಲಕ ದುಃಖ ಅಥವಾ ಬೇಸರದಲ್ಲಿರುವಂತ ಆತ್ಮ ಸುಖ ಹಾಗೂ ಖುಷಿಯ ಅನುಭವವನ್ನು ಮಾಡುತ್ತದೆ. ಅವರ ಕರ್ತವ್ಯವಾಗಿರುತ್ತದೆ- ಸುಖವನ್ನು ಕೊಡುವುದು ಮತ್ತು ಸುಖವನ್ನು ತೆಗೆದುಕೊಳ್ಳುವುದು, ಹೇಗೆ ಪ್ರಜೆಗಳೂ ಸಹ ತಮ್ಮ ಯೋಗ್ಯರಾಜನನ್ನು ನೋಡಿ ಖುಷಿಯಾಗಿಬಿಡುತ್ತಾರೆ ಹಾಗೆಯೇ *ಸದಾ ಆರೋಗ್ಯ, ಸಂತೋಷ, ಸಂಪನ್ನವಾಗಿರುವ ಆತ್ಮನನ್ನು ನೋಡಿ ಎಂತಹದ್ದೇ ದುಃಖಿ ಆತ್ಮವೂ ಸಹ ಸುಖದ ಅನುಭವವನ್ನು ಮಾಡುತ್ತದೆ.* ಅಪ್ರಾಪ್ತಿಯಲ್ಲಿರುವ ಆತ್ಮವು ದಾತನನ್ನು ನೋಡಿ ಪ್ರಾಪ್ತಿಯ ಖುಷಿಯಲ್ಲಿ ನೃತ್ಯಮಾಡಲು ತೊಡಗುತ್ತದೆ. ತಮ್ಮನ್ನು ಇಂತಹವರೆಂದು ಅನುಭವ ಮಾಡುತ್ತಿದ್ದೀರಾ? ಕೊಡುವಂತಹ ದಾತಾನ ಮಕ್ಕಳು, ತಂದೆಯ ಸಮಾನ ದಾತರಾಗಿದ್ದೀರಾ ಅಥವಾ ಭಕ್ತರ ಸಮಾನ ತೆಗೆದುಕೊಳ್ಳುವವರಾಗಿದ್ದೀರಾ ಅಥವಾ ತೆಗೆದುಕೊಳ್ಳುವುದು ಮತ್ತು ಕೊಡುವುದು ಜೊತೆಜೊತೆಯಲ್ಲಿ ನಡೆಯುತ್ತಿದೆಯೇ? ತೆಗೆದುಕೊಳ್ಳುವುದು ಕೊಡುವುದಕ್ಕಾಗಿಯೇ ಆಗಿದೆ. ಖಜಾನೆಯಿದೆಯೆಂದರೆ ಹಂಚುವುದಕ್ಕಾಗಿಯೇ ಇದೆ ಮತ್ತು ವಿಶ್ವ ಕಲ್ಯಾಣಕ್ಕಾಗಿಯೇ ಇರುವುದಾಗಿದೆ. ಪ್ರತೀ ಸೆಕೆಂಡಿನಲ್ಲಿ ತೆಗೆದುಕೊಳ್ಳುವುದರ ಜೊತೆ ಜೊತೆಯಲ್ಲಿ ತೆಗೆದುಕೊಳ್ಳುವಂತಹ ದಾತರೂ ಆಗಬೇಕು. ಆಗಲೇ ವಿಶ್ವಕಲ್ಯಾಣಕಾರಿ ಎಂದು ಕರೆಯಿಸಿಕೊಳ್ಳಲು ಸಾಧ್ಯವಾಗುತ್ತದೆ. ತೆಗೆದುಕೊಳ್ಳುವ ಮತ್ತು ಕೊಡುವಂತಹ ತಮ್ಮ ಲೆಕ್ಕವನ್ನು ಪರಿಶೀಲನೆ ಮಾಡಿಕೊಳ್ಳಿರಿ. ಎಷ್ಟು ತೆಗೆದುಕೊಳ್ಳಬೇಕಾಗಿದೆಯೋ ಅಷ್ಟು ತೆಗೆದುಕೊಳ್ಳುತ್ತೇನೆ ಮತ್ತು ತೆಗೆದುಕೊಳ್ಳುವುದರ ಜೊತೆಜೊತೆಯಲ್ಲಿ ಎಷ್ಟು ಕೊಡಬೇಕಾಗಿದೆಯೋ ಅಷ್ಟನ್ನೇ ಕೊಡುತ್ತೇನೆಯೇ? ತೆಗೆದುಕೊಳ್ಳುವುದು ಮತ್ತು ಕೊಡುವುದು ಜೊತೆಜೊತೆಯಲ್ಲಿ ಮತ್ತು ಸಮಾನವಾಗಿದೆಯೇ? ಇಂತಹ ವಿಶ್ವಕಲ್ಯಾಣಿಯೇ ವಿಶ್ವ ಮಹಾರಾಜನಾಗಬಹುದು. ತಿಳಿಯಿತೆ?

**ಇಂತಹ ಮಹಾದಾನಿ, ಸರ್ವಪ್ರಾಪ್ತಿಗಳ ಮೂಲಕ ಸರ್ವಾತ್ಮರನ್ನು ಸಂಪನ್ನ ಮಾಡುವಂತಹ, ಬಿಕಾರಿಯನ್ನು ಅಧಿಕಾರಿಯನ್ನಾಗಿ ಮಾಡುವಂತಹ, ನಿರ್ಬಲ ಆತ್ಮರನ್ನು ಶಕ್ತಿಶಾಲಿ ಮಾಡುವಂತಹ, ಸದಾ ಆರೋಗ್ಯ, ಸದಾ ಸಂಪನ್ನ, ಸದಾ ಸಂತೋಷ ಆತ್ಮರಿಗೆ ಹಾಗೂ ಸರ್ವಶ್ರೇಷ್ಠ ಆತ್ಮರಿಗೆ ಬಾಪ್‌ದಾದಾರವರ ನೆನಪು ಪ್ರೀತಿ ಹಾಗೂ ನಮಸ್ತೆ.**

ಅವ್ಯಕ್ತ ಮುರಳಿ 27-01-1976.

***ಮೂರು ಶ್ರೇಷ್ಠ ಈಶ್ವರೀಯ ವರದಾನಗಳು***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ**

ನಾನಾತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನನ್ನ ಮುಖದಿಂದ, ತಂದೆಯಿಂದ ಪ್ರಾಪ್ತಿಯಾಗಿರುವ ಸರ್ವಶಕ್ತಿಗಳ ಸ್ವರೂಪ ಕಂಡಿದೆ.

2. ನಾನು ನನ್ನ ಮುಖ ಮತ್ತು ನಡವಳಿಕೆಯಿಂದ ತಂದೆಯ ಸಮಾನವಾಗಿ, ಸದಾ ಆತ್ಮಿಕವಾಗಿ ಕಾಣಿಸುವ ತೀವ್ರಪುರುಷಾರ್ಥಿ.

3. ನಾನು ಅಕಾಲಮೂರ್ತಿ(ನಿರಾಕರ ಸ್ಥಿತಿ) ಮತ್ತು ತ್ರಿಕಾಲದರ್ಶಿ (ಸಕಾರ ಕರ್ಮಯೋಗ ಸ್ಥಿತಿ).

4. ನಾನು ನಿರಾಕಾರಿ ಮತ್ತು ಸಾಕಾರಿ ಈ ಎರಡೂ ಸ್ವರೂಪದಲ್ಲಿರುವುದರಿಂದ ಸದಾ ಆರೋಗ್ಯ, ಸಂಪನ್ನತೆ, ಮತ್ತು ಸಂತೋಷವನ್ನು ಅನುಭವ ಮಾಡಿಕೊಂಡಿದ್ದೇನೆ.

5. ನಾನು ಪರಮಾತ್ಮನಿಂದ ಸದಾ ಆರೋಗ್ಯ ಭವ ಎಂಬ ವರದಾನವನ್ನು ಪಡೆದು ಸದಾ ಆರೋಗ್ಯವಾಗಿ ಇದ್ದೇನೆ.

6. ನಾನು ಸಾಕ್ಷಿ ಸ್ಥಿತಿಯಲ್ಲಿ ತ್ರಿಶೂಲದಂತಿರುವ ಪ್ರತಿಕರ್ಮಭೋಗವನ್ನು ಮುಳ್ಳಿನಂತೆ ಅನುಭವ ಮಾಡಿಕೊಂಡಿದ್ದೇನೆ.

7. ನಾನು ಸರ್ವಶಕ್ತಿಗಳು ಮತ್ತು ಸರ್ವಖಜಾನೆಗಳಿಗೆ ಯಜಮಾನಿಯಾಗಿರುವ ಸದಾ ಸಂಪನ್ನ ಭವ ಎಂಬ ವರದಾನವನ್ನು ಪಡೆದಿದ್ದೇನೆ.

8. ನಾನು ಪರಮಾತ್ಮನಿಂದ ಸದಾ ಸಂತೋಷ ಭವ ಎಂಬ ವರದಾನವನ್ನು ಪಡೆದು "ಏನನ್ನು ಪಡೆಯಬೇಕಿತ್ತೋ ಅದನ್ನು ಪಡೆದನು" ಎಂಬ ಸಂಕಲ್ಪದಲ್ಲಿ ಸ್ಥಿತವಾಗಿ ಮನಸಾ, ವಾಚಾ, ಕರ್ಮಣಾ ಸರ್ವಾತ್ಮರಿಗೆ ಸಂತೋಷವನ್ನು ಕೊಡುವ ದಾತನಾಗಿದ್ದೇನೆ.

9. ನಾನು ನನ್ನನ್ನು ಎಷ್ಟು ದುಃಖದಲ್ಲಿರುವ ಆತ್ಮ ನೋಡಿದಾಗಲೂ ಸುಖವನ್ನು ಅನುಭವ ಮಾಡಿಕೊಳ್ಳುವಷ್ಟು ಆರೋಗ್ಯವಾಗಿ, ಸಂಪನ್ನವಾಗಿ, ಸಂತೋಷವಾಗಿ ಇದ್ದೇನೆ.

10. ನಾನು ಕೊಡುವ ಮತ್ತು ತೆಗೆದುಕೊಳ್ಳುವುದನ್ನು ಜೊತೆಜೊತೆಗೆ ಮತ್ತು ಸಮಾನವಾಗಿ ಇಟ್ಟುಕೊಂಡಿರುವ ವಿಶ್ವಕಲ್ಯಾಣಕಾರಿ ಮತ್ತು ವಿಶ್ವ ಮಹಾರಾಜನು.